ಎಂದು ಆಜ್ಞೆಮಾಡಿದಳು. ಎಲ್ಲಾ ತೆಗೆದು ಮಗನ ಕೈಗೆ ವರ್ಗಾಯಿಸಿದೆ.

"ಬಟ್ಟೆ ಬದಲಾಯಿಸಿ ಈ ಗೌನು ಧರಿಸಿ."

"ಯಾಕೆ ಸಿಸ್ಟರ್? ಕಣ್ಣಿಗೆ ತಾನೇ ಚಿಕಿತ್ಸೆ? ನನ್ನ ಸೀರೆ ಏನ್ಮಾಡೀತು?"

"ಅದೆಲ್ಲಾ ರೂಲ್ಸು."

"ಚಪ್ಪಲಿ ಕಳಚಿ ಈ ಕಾಲ್ಚೀಲ ಹಾಕಿ."

"ಕಾಲ್ಚೀಲ ಯಾಕೆ? ಕಣ್ಣಿಗೆ ತಾನೇ ಆಪರೇಶನ್?"

"ರೂಲ್ಸು."

ನನ್ನ ಹಿಂದೆ ನಿಂತೂ ನನ್ನ ಕೂದಲನ್ನು ಒಟ್ಟುಮಾಡಿ ತಲೆಗೊಂದು ಟೋಪಿ ಹಾಕಿ ಅದರೊಳಗೆ ತೂರಿಸಿದಳು. ನಾನು ಬಾಯ್ತೆರೆಯುವ ಮುನ್ನ ರೂಲ್ಸು ಎಂದು ಬಾಯ್ಮುಚ್ಚಿಸಿದಳು. ನನಗಂತೂ ವಧಾಸ್ಥಾನಕ್ಕೆ ಹೋಗುವ ಕೈದಿಯಂತೆ ಭಾಸವಾಗಿ ಕೈಕಾಲು ನಡುಕ ಶುರುವಾಯಿತು. ಆಪರೇಶನ್ ಥೀಯೇಟರ್ ಒಳಗೆ ತಳ್ಳಿ ಮುಖವಾಡ ಧರಿಸಿ ಕಾಯುತ್ತಿದ್ದ ನಾಲ್ಕು ಭಯೋತ್ಪಾದಕರಿಗೆ ಹಸ್ತಾಂತರಿಸಿ ತಾನು ಕೈತೊಳೆದುಕೊಂಡಳು.

ಟೇಬಲ್ ಮೇಲೆ ಮಲಗಿಸಿ ಕೈಕಾಲುಗಳು ಆಡದಂತೆ ಅದೇನೋಹಾಕಿ ಬಂಧಿಸಿದರು. ಒಂದು ಕಣ್ಣನ್ನು ಬಟ್ಟೆಯಿಂದ ಮುಚ್ಚಿದರು. ಮತ್ತೊಂದರಮೇಲೆ ಅದೇನೊ ಸವರಿದಂತಾಗಿ ಕಣ್ರೆಪ್ಪೆ ಸಿಕ್ಕಿಕೊಂಡಂತಾಗಿ ಕಣ್ಮುಚ್ಚಲಾಗಲೇ ಇಲ್ಲ. "ಅಯ್ಯಯ್ಯೋ, ಏನ್ಮಾಡಿದ್ರಿ? ಕಣ್ಣು ಮುಚ್ಚೊಕ್ಕೇ ಆಗ್ತಾ ಇಲ್ಲ. ಏನ್ಮಾಡಿದ್ರೀ?" ಕೂಗಿಕೊಂಡೆ.

"ಕಣ್ಮುಚ್ಚಿಕೊಂಡರೆ ಆಪರೇಷನ್ ಹೇಗೆ ಮಾಡೋದು? ಮಾತಾಡ್ದೆ ಮಲಗಿ" ಎಂದಿತೊಂದು ಮುಖವಾಡ. ಬಲಗೈ ನರಕ್ಕೆ ಚುಚ್ಚಿದಂತಾಯ್ತು. ಅರಚಿದೆ. ಕಣ್ಣು ಕೋರೈಸುವ ಬೆಳಕು. ಕುರುಡಳಾದೆ.

ಗಾಢ ಕತ್ತಲಿದ್ದರೆ ಕುರುಡಾಗುವುದು ಸಹಜ. ಕೋರೈಸುವ ಬೆಳಕಿದ್ದರೂ ಕುರುಡಾಗುವುದೇ? ಹಾಗಾದರೆ ಗಾಢ ಕತ್ತಲಿಗೂ ಪ್ರಖರ ಬೆಳಕಿಗೂ ವ್ಯತ್ಯಾಸವಿಲ್ಲವೇ? ಜ್ಞಾನಕ್ಕೂ ಅಜ್ಞಾನಕ್ಕೂ ಅಂತರವಿಲ್ಲವೇ? ತಾತ್ವಿಕ ಪ್ರಶ್ನೆ ಮನಸ್ಸಿನಲ್ಲಿ ಕ್ಷಣಕಾಲ ಸುಳಿದುಹೋಯಿತು.

ಕಣ್ಣಿಗೆ ತಣ್ಣಗಿದ್ದದ್ದೇನೋ ಸುರಿದರು. "ನೋವಾದರೆ ಹೇಳಿಮ್ಮ" ಎಂದು ಹೇಳಿದ್ದೇ ತಡ ಮುನ್ನೆಚ್ಚರಿಕೆಯಾಗಿ ನೋವಾಗದಿದ್ದರೂ ಗಟ್ಟಿಯಾಗಿ ನರಳಿದೆ. ಮತ್ತಷ್ಟು ತಣ್ಣನೆ ದ್ರವ ಸುರಿದಂತಾಯ್ತು. ಅಯ್ಯೋ ಭಗವಂತ. ಭಯವಾಗ್ತಿದೆಯಲ್ಲಾ ಏನ್ಮಾಡ್ಲೀ? ನೀನೇ ಕಾಪಾಡಪ್ಪಾ. ತಿರುಪತಿ ತಿಮ್ಮಪ್ಪಾ, ನಂಜುಂಡೇಶ್ವರ, ಮಂಜುನಾಥ, ಉಡುಪಿ ಕೃಷ್ಣ, ಹಂಪೆ ವಿರೂಪಾಕ್ಷ, ಗುರು ರಾಘವೇಂದ್ರ, ಶಿರಡಿ ಸಾಯಿಬಾಬ ಎಲ್ರೂ ಎಲ್ಲಿ ಹೋದ್ರಿ? ಇವರೆಲ್ಲರಿಗಿಂತ ಹೆಣ್ಣು ದೇವರುಗಳೇ ವಾಸಿ. ಎಷ್ಟಂದ್ರೂ ಹೆಂಗರುಳು. ಏನು ಕೆಲ್ಸ ಇದ್ರೂ ಬಿಟ್ಟು ಧಾವಿಸಿ ಬರ್ತಾರೆ. ಶೃಂಗೇರಿ ಶಾರದೆ, ಬೆಟ್ಟದ ಚಾಮುಂಡಿ, ಸವದತ್ತಿ ಎಲ್ಲಮ್ಮಾ, ಕೊಲ್ಲೂರು ಮೂಕಾಂಬಿಕೆ, ಹೊರನಾಡು ಅನ್ನಪೂರ್ಣೇಶ್ವರಿ, ತಾಯಂದಿರಾ. ನನ್ನ ಕೈ ಬಿಡ್ಬೇಡಿ."

"ಆಯ್ತಮ್ಮಾ, ಪೊರೆ ತೆಗೆದಾಯ್ತು. ನೀವು ಬಹಳ ಸಹಕರಿಸಿದಿರಿ. ಇನ್ನು ನೀವು ಹೋಗಬಹುದು." ಮುಖವಾಡದ ಹಿಂದಿನಿಂದ ಧ್ವನಿ ಕೇಳಿಸಿತು. ದೇವರ ಸ್ಮರಣೆ ಥಟ್ಟನೆ ನಿಂತಿತು. ಬಂಧನ ಕಳಚಿದರು.

"ನೀವೆದ್ದು ಹೋಗೀಮ್ಮಾ" ಎಂದು ಒಬ್ಬನೆಂದಾಗ ಅದ್ಯಾಕೊ ಅವನು ಭಯೋತ್ಪಾದಕನಂತೆ ಕಾಣಿಸಲೇಇಲ್ಲ!

"ಈಗ್ತಾನೇ ಆಪರೇಶನ್ ಆಗಿದೆ. ಎದ್ದು ನಡೀಬಹುದಾ?" ಸಂದೇಹದಿಂದ ಕೇಳಿದೆ. "ನಡ್ಯೋದಷ್ಟೇ ಅಲ್ಲ. ಬೇಕಾದ್ರೆ ಡ್ಯಾನ್ಸ್ ಕೂಡಾ ಮಾಡ್ಬಹುದು." ಥೀಯೇಟರ್‌ನಲ್ಲಿ ನಗೆ ತುಂಬಿತು.